**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:14**

**ಎಸ್.ಸಿ. ಸಂಖ್ಯೆ:501/2023 ಪಿಡಬ್ಲ್ಯೂ:19**

**ಸಾಕ್ಷಿದಾರರ ಹೆಸರು** : ಶ್ರೀಧರ್ ನಾಯ್ಕ

**ತಂದೆ ಹೆಸರು** : ಪರಮೇಶ ನಾಯ್ಕ

**ವಯಸ್ಸು** : 35

**ವೃತ್ತಿ** : ಪಿ ಎಸ್ ಐ ಹರಿಹಪುರ ಪೋಲೀಸು ಠಾಣೆ

**ವಾಸ** : ಹರಿಹರಿಪುರ

**ದಿನಾಂಕ: 20-02-2026 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನಾನು ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ 2019 ನವೆಂಬರ್ ನಿಂದ 2023 ಜನವರಿ ವರೆಗೆ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಶಂಕನಾರಾಯಣ ಪೋಲೀಸು ಠಾಣಾ ಅಪರಾಧ ಕ್ರಮ ಸಂಖ್ಯೆ 94/2022 ಕ್ಕೆ ಸಂಬಂಧಪಟ್ಟಂತೆ ಮಾನ್ಯ ವೃತ್ತ ನಿರೀಕ್ಷಕರು ಕುಂದಾಪುರ ವೃತ್ತ ಇವರು ಮೌಖಿಕವಾಗಿ ಸದ್ರಿ ಪ್ರಕರಣದ ಆರೋಪಿತನಾದ ಕೃಷ್ಣ ನಾಯ್ಕ ಇವನನ್ನು ವಶಕ್ಕೆ ಪಡೆದು ತನ್ನ ಮುಂದೆ ಹಾಜರುಪಡಿಸಬೇಕೆಂದು ಸೂಚಿಸಿದ ಮೇರೆಗೆ ಸದ್ರಿ ಪ್ರಕರಣದ ಆರೋಪಿತನಾದ ಕೃಷ್ಣ ನಾಯ್ಕ ಇವನನ್ನು ದಿ:26-09-2022 ರಂದು ಬೆಳಿಗ್ಗೆ 9.00 ಗಂಟೆಗೆ ಹಾಲಾಡಿಯ ಪೇಟೆಯಲ್ಲಿ ವಶಕ್ಕೆ ಪಡೆದು ಅದೇ ದಿನ ಬೆಳಿಗ್ಗೆ 10.00 ಗಂಟೆಗೆ ಮಾನ್ಯ ವೃತ್ತ ನಿರೀಕ್ಷಕರು ಕುಂದಾಪುರ ವೃತ್ತ ಇವರ ಮುಂದೆ ವಿಚಾರಣೆಗಾಗಿ ಹಾಜರುಪಡಿಸಿರುತ್ತೇನೆ. ಈ ಬಗ್ಗೆ ವೃತ್ತ ನಿರೀಕ್ಷಕರಿಗೆ ನಾನು ವರದಿ ನೀಡಿರುತ್ತೇನೆ. ಸಾಕ್ಷಿ ಸದ್ರಿ ವರದಿ ನೋಡಿ ಗುರುತಿಸಿದ್ದು ಅದನ್ನು ನಿಪಿ-25 ಎಂದೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-25 ಎ ಎಂದು ಗುರುತಿಸುತ್ತೇನೆ. ಆರೋಪಿತನನ್ನು ನೋಡಿದರೆ ಗುರುತಿಸಿಸುತ್ತೇನೆ. ಆರೋಪಿತನು ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಿದ್ದು ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿದ್ದು ಆರೋಪಿತನ

ಗುರುತಿಸುವಿಕೆಯ ಬಗ್ಗೆ ಆರೋಪಿ ಪರ ವಕೀಲರು ತಮ್ಮ ತಕರಾರು ಇಲ್ಲಾ ಅಂತ ಹೇಳಿರುವುದರಿಂದ ಸಾಕ್ಷಿ ಆರೋಪಿತನನ್ನು ಗುರುತಿಸಿರುವುದಾಗಿ ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಪಿ ಕೆ. ವಕೀಲರಿಂದ**

ಆರೋಪಿತನನ್ನು ವಶಕ್ಕೆ ಪಡೆದುಕೊಂಡ ಸ್ತಳ ಹಾಲಾಡಿಯ ಮಾರುಕಟ್ಟೆ ಮತ್ತು ಅಲ್ಲಿ ಸುತ್ತ ಮುತ್ತ ಸಾಕಷ್ಟು ಅಂಗಡಿ ಮುಂಗಟ್ಟುಗಳು ಇವೆ ಎಂದರೆ ಸರಿ. ನಾನು ವಶಕ್ಕೆ ಪಡೆದುಕೊಳ್ಳುವಾಗ ಸ್ಥಳೀಯರು ಸಾಕಷ್ಟು ಜನರು ಅಲ್ಲಿ ಇದ್ದರು. ಆರೋಪಿತನನ್ನು ವಶಕ್ಕೆ ಪಡೆದುಕೊಳ್ಳುವ ಸಮಯದಲ್ಲಿ ನಾನು ಯಾವುದೇ ಪಂಚನಾಮೆ ಮಾಡಿಲ್ಲ ಪಂಚನಾಮೆ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ಆರೋಪಿತನನ್ನು ವಶಕ್ಕೆ ಪಡೆದುಕೊಂಡ ಸ್ತಳ ಹಾಲಾಡಿಯ ಬಸ್ ನಿಲ್ದಾಣದ 10 ಮೀಟರ್ ದೂರದಲ್ಲಿ. ಮೇಲಾಧಿಕಾರಿಯವರು ನನಗೆ ಆರೋಪಿತನನ್ನು ವಶಕ್ಕೆ ಪಡೆದುಕೊಂಡು ಅವರ ಮುಂದೆ ಹಾಜರುಪಡಿಸಲು ಯಾವುದೇ ಆದೇಶ ನೀಡಿಲ್ಲ ಎಂದರೆ ಸರಿ ಅಲ್ಲಾ. ನಿಪಿ-25 ವರದಿಯನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಆರೋಪಿತನನ್ನು ನಾನು ವಶಕ್ಕೆ ಪಡೆದುಕೊಳ್ಳದಿದ್ದರೂ ಸಹಾ ವಶಕ್ಕೆ ಪಡೆದುಕೊಂಡಿದ್ದೆ ಅಂತ ನೀಡಿದ ಸುಳ್ಳು ವರದಿ ಎಂದರೆ ಸರಿ ಅಲ್ಲಾ. ನಾನು ಹೇಳಿದಂತಹಾ ಸ್ತಳದಲ್ಲಿ, ಸಮಯದಲ್ಲಿ ಆರೋಪಿತನನ್ನು ಯಾವತ್ತೂ ವಶಕ್ಕೆ ಪಡೆದುಕೊಂಡಿಲ್ಲ ಎಂದರೆ ಸರಿ ಅಲ್ಲಾ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕುಂದಾಪುರ